

ಮಣಿಪುರಿ ನೃತ್ಯವನ್ನು ದೇಗುಲಗಳ ಅಂಗಳದಿಂದ ವಿಶ್ವವೇದಿಕೆಗೆ ತಂದ ಜವೇರಿ ಸೋದರಿಯರು

ಐದು ರೀತಿಯ ಬಂಗೀಪರೇನ್‌ಗಳನ್ನು ಕಲಿತೆವು ಮತ್ತು ಬಹುಕಾಲ ಅಲ್ಲಿಯೇ ಉಳಿದುಕೊಂಡೆವು. ಅದಕ್ಕಾಗಿ ನನ್ನ ತಂದೆಯವರು ಎಲ್ಲ ವ್ಯವಸ್ಥೆಯನ್ನೂ ಮಾಡಿದ್ದರು. ಬರೀ ನೃತ್ಯ ನೋಡುವುದಷ್ಟೇ ಅಲ್ಲ, ಅಲ್ಲಿನ ಸಂಸ್ಕೃತಿ, ನೃತ್ಯದ ಜೊತೆಗೆ ತಳುಕು ಹಾಕಿಕೊಂಡ ನಂಬಿಕೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆವು. ಅಲ್ಲಿನ ವಿವಿಧ ಹಳ್ಳಿಗಳಿಗೆ ತೆರಳಿ ಗುರುಗಳನ್ನು ಸಂದರ್ಶಿಸಿದೆವು. ಅವರ ಮನೆಗಳಲ್ಲಿ ಉಳಿದುಕೊಂಡು ಅವರ ಜ್ಞಾನವನ್ನು ಸಂಗ್ರಹಿಸಿದೆವು. ನೃತ್ಯಸೇವೆಯನ್ನು ಸಲ್ಲಿಸುತ್ತಿದ್ದವರ ಮನೆಗಳಿಗೆ ತೆರಳಿ ಅವರ ಮಾತುಗಳನ್ನು, ನಂಬಿಕೆಗಳನ್ನು ಆಲಿಸಿದೆವು. ನೃತ್ಯ ಸೇವೆಗೆ ಪೂರಕವಾಗಿ ಅವರು ಮಾಡುತ್ತಿದ್ದ ಆಚರಣೆಗಳೇನು, ಅನುಷ್ಠಾನಗಳೇನು ಎಂಬುದನ್ನು ಗಮನಿಸಿದೆವು.

ಮಣಿಪುರದ ಜನರ ಜೀವನದಲ್ಲಿ ಸಂಗೀತ ಮತ್ತು ನೃತ್ಯ ಉಸಿರಾಡುವ ಗಾಳಿಯಷ್ಟೇ ಸಹಜವಾದುದು. ಅವರು ನೃತ್ಯಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ರೀತಿನೀತಿಗಳನ್ನು ಕಂಡು, ಅದರ ಬಗ್ಗೆ ಅವರು ಹೊಂದಿರುವ ಭಕ್ತಿಯನ್ನು ಕಂಡು ನಾವು ಬೆರಗಾಗಿದ್ದೆವು. ಅಲ್ಲಿನ ಗುರುಗಳು ಕೃಷ್ಣ-ರಾಧೆಯ ರಾಸ್‌ಲೀಲಾ ಮತ್ತು ಸಂಕೀರ್ತನೆಯನ್ನು ಕಲಿಸುವ ವಿಧಾನಗಳನ್ನು ಕಂಡು ಮೂಕರಾಗಿದ್ದೆವು.

◆ **ನೀವು ಮಣಿಪುರದವರಲ್ಲ. ಮಣಿಪುರಿ ಸಂಸ್ಕೃತಿಗೆ 'ಅನ್ಯ'ರಾಗಿದ್ದ ಕಾರಣ ನಿಮ್ಮ ಅಧ್ಯಯನ, ಸಂಶೋಧನೆಗಳಿಗೆ ಪ್ರತಿರೋಧ ಎದುರಾಗಲಿಲ್ಲವೇ?**

ಹೌದು. ಇದೊಂದು ಬಹಳ ಸೂಕ್ಷ್ಮವಾದ ಕೆಲಸವಾಗಿತ್ತು. ನಾವು ಈ ಕೆಲಸವನ್ನು ನಿರ್ವಹಿಸುತ್ತಿರುವಾಗ ನಮಗೆ ಪ್ರತಿರೋಧ ಎದುರಾಗಬಹುದು ಎಂಬ ನಿರೀಕ್ಷೆಯಾಗಲೀ ಅರಿವಾಗಲೀ ಇರಲಿಲ್ಲ. ನಮ್ಮ ಗುರುಗಳಾದ ಬಿಪಿನ್ ಸಿಂಗ್ ಅವರು ಮಣಿಪುರಿ ಸಂಸ್ಕೃತಿಯವರೇ ಆಗಿರುವುದರಿಂದ ಅವರು ತಮಗೆ ಗೊತ್ತಿರುವ ಇತರ ಗುರುಗಳ ಮನೆಗಳಿಗೆ, ಭಕ್ತರ ಮನೆಗಳಿಗೆ ನಮ್ಮನ್ನು ಕಳುಹಿಸುತ್ತಿದ್ದರು. ನಮ್ಮ ಕೆಲಸ ಕಾರ್ಯಗಳ ಉದ್ದೇಶವೇನಿದ್ದರೂ, ಮಣಿಪುರಿ ನೃತ್ಯ ಪ್ರಕಾರಕ್ಕೆ ಹೆಚ್ಚಿನ ಮನ್ನಣೆ ದೊರೆಯುವಂತೆ ಮಾಡುವುದೇ ಆಗಿತ್ತು. ಅಲ್ಲದೇ ಭಕ್ತಿಯನ್ನಷ್ಟೇ ಉದ್ದೇಶವಾಗಿಟ್ಟುಕೊಂಡು, ನೃತ್ಯವನ್ನು ದೇವಸ್ಥಾನಗಳಲ್ಲಿ ಸಮರ್ಪಣೆ ಮಾಡುತ್ತಿದ್ದವರು, ನಮ್ಮ